## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ನ್ಯಾಯಾಲಯ, ಕಾರವಾರ

ಸಿ.ಸಿ.ನಂಃ 2312/2024

ಪಿ ಡಬ್ಲ್ಯೂಃ 01

| | |
|---|---|
| ಸಾಕ್ಷಿದಾರರ ಹೆಸರು | ನಿತೇಶ ಕೋಟಾರಕರ |
| ತಂದೆಯ ಹೆಸರು | ತಾರಾನಾಥ ಕೋಟಾರಕರ |
| ವಯಸ್ಸು | 27 ವರ್ಷ |
| ಉದ್ಯೋಗ | ಅಧಿಕಾರಿ, ಸೆಂಟ್ ಮಿಲಾಗ್ರಿಸ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ. ಕಾರವಾರ |
| ವಾಸ್ತವ್ಯ | ಕಾರವಾರ |

(ಇಂದು ದಿನಾಂಕಃ 20.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ವಕೀಲರಾದ ಶ್ರೀ ಆರ್. ವಿ. ಬಿ. ರವರಿಂದಃ**

ಮಾನ್ಯ ಸರ್ವೋಚ್ಚ ನ್ಯಾಯಾಲಯದ (2014) 5 ಎಸ್.ಸಿ.ಸಿ. 590-- ಇಂಡಿಯನ್ ಬ್ಯಾಂಕ್ಸ್ ಅಸೋಷಿಯೇಶನ್ ವಿರುದ್ಧ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿನ ತೀರ್ಪನ್ನು ಆಧರಿಸಿ ಈ ಪ್ರಕರಣದಲ್ಲಿ ಪಿರ್ಯಾದುದಾರ ಪರ ವಕೀಲರು ಸಲ್ಲಿಸಿರುವ ಜ್ಞಾಪನವನ್ನು ಪರಿಗಣಿಸಿ, ಈ ಹಿಂದೆ ಪಿರ್ಯಾದುದಾರರು ತಮ್ಮ ಸ್ವ ಪ್ರತಿಜ್ಞಾ ಹೇಳಿಕೆಯ ಸಲುವಾಗಿ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಪಿರ್ಯಾದುದಾರರ ಪರ ಸಾಕ್ಷ್ಯವನ್ನಾಗಿ ಪರಿಗಣಿಸಲಾಯಿತು. ಈ ಪ್ರಕಣದಲ್ಲಿ ಸ್ವ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವಾಗ ಪಿರ್ಯಾದಿಯೊಂದಿಗೆ ಸಲ್ಲಿಸಲಾದ ದಾಖಲೆಗಳನ್ನು ನಿಶಾನೆಗೊಳಿಸಿರದ ಕಾರಣ ಸದ್ರಿ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

(1. ದಿಃ 23.04.2024ರ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ ಕದ್ರಾ ಶಾಖೆಯ ನಂಬರ್ 948161ರ ರೂ.2,98,405/- ದ ಚೆಕ್‌ನ್ನು ನಿಪಿ-1,

2. ಸಾಕ್ಷಿ ಸದರಿ ಚೆಕ್ ನಲ್ಲಿ ಕಾಣುವ ಸಹಿಯನ್ನು ನೋಡಿ ಅದು ಆರೋಪಿಯ ಸಹಿ ಎಂದು ಹೇಳಿದ್ದಕ್ಕೆ ಆರೋಪಿಯ ಸಹಿಯನ್ನು ನಿಪಿ-1 (ಎ),

3. ದಿಃ 29.04.2024ರ ಚೆಕ್ ರಿಟರ್ನ ಮೆಮೋವನ್ನು ನಿಪಿ-2,

4. ದಿಃ 24.05.2024ರ ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-3,

5. ಆರೋಪಿಗೆ ಕಳುಹಿಸಲಾಗಿ ವಾಪಾಸು ಬಂದಿದೆ ಎನ್ನಲಾದ ಒಂದು ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ ಸದ್ರಿ ಅಂಚೆ ಲಕೋಟೆಯಲ್ಲಿರುವ ವಕೀಲರ ನೋಟಿಸನ್ನು ನಿಪಿ-4 ಮತ್ತು ವಾಪಾಸು ಬಂದಿರುವ ಅಂಚೆ ಲಕೋಟೆಯನ್ನು ನಿಪಿ-4(ಎ),

6. ದಿಃ 28.03.2024 ರ ಆಡಳಿತ ಮಂಡಳಿ ಸಭೆಯ ಠರಾವಿನ ಪ್ರತಿಯನ್ನು ನಿಪಿ-5,

7. ದಿಃ 27.06.2024 ರ ಅಧಿಕಾರ ಪತ್ರವನ್ನು ನಿಪಿ-6,

8. ದಿಃ 01.01.2022 ರ ವ್ಯಾಪಾರ ಸಾಲದ ಅರ್ಜಿಯನ್ನು ನಿಪಿ-7,

9. ದಿಃ 24.01.2022 ರ ಸಾಲ ಶಿಫಾರಸ್ಸು ಪತ್ರವನ್ನು ನಿಪಿ-8,

10. ದಿಃ 27.01.2022 ರ ಮುದ್ದತಿ ವಚನ ಪತ್ರವನ್ನು ನಿಪಿ-9,

11. ದಿಃ 27.01.2022 ರ ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ನಿಪಿ-10,

12. ದಿಃ 27.01.2022 ರ ಸಾಲದ ಕರಾರನ್ನು ನಿಪಿ-11,

13. ದಿಃ 27.01.2022 ರ ಹೈಪೋಥಿಕೇಷನ್ ಎಗ್ರಿಮೆಂಟನ್ನು ನಿಪಿ-12,

14. ಹೆಚ್ಚುವರಿ ಜಾಮೀನುದಾರರ ವಿವರವನ್ನು ನಿಪಿ-13,

15. ಸಾಲದ ಖಾತೆಯ ಸ್ಟೇಟಮೆಂಟ್ ಆಪ್ ಅಕೌಂಟನ್ನು ನಿಪಿ-14 ಎಂದು ಗುರುತಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಎನ್ ಐ ಆಕ್ಟ ನ ಕಲಂ 145(2) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿ, ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಾರವಾರ